sdmimd

## Vijaya Karnataka

**Date:** Sunday, July 22, 2012 **Page No.** 4

**Edition:** Mysore **Language:** Kannada

# ಅಶಾಂತಿಗೆ ನಿರುದ್ಯೋಗ ಕಾರಣ



ಮೈಸೂರಿನ ಎಸ್‌ಡಿಎಂ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಶನಿವಾರ ಸಂಸ್ಥಾಪನ ದಿನದ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ಡಾ. ದೇವಿ ಪ್ರಸಾದ್ ಶೆಟ್ಟಿ, ಧರ್ಮಸ್ಥಳದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ, ಡಾ. ಎನ್. ಆರ್. ಪರಶುರಾಮನ್ ಭಾಗವಹಿಸಿದ್ದರು.

▪ ವಿಕ ಸುದ್ದಿಲೋಕ ಮೈಸೂರು

'ಆರೋಗ್ಯ ವಲಯ ಅಂದ್ರೆ ಅದು ಕೇವಲ ವೈದ್ಯರಿಗೆ ಸಂಬಂಧಿಸಿದ್ದಲ್ಲ, ಅಲ್ಲಿಗೆ ನಿರ್ವಹಣೆ ಕೌಶಲ ಇರುವ ಆಡಳಿತಗಾರರು ಬೇಕಿದ್ದಾರೆ. ಕೃಷಿ ವಲಯದ ಬಳಿಕ ಅತಿಹೆಚ್ಚು ಉದ್ಯೋಗ ಸೃಷ್ಟಿಯಾಗುತ್ತಿರುವ ಈ ವಲಯಕ್ಕೆ ಯುವಕರು ಬರಬೇಕಿದೆ' ಎಂದು ಹೃದಯ ತಜ್ಞ ಡಾ. ದೇವಿ ಪ್ರಸಾದ್ ಶೆಟ್ಟಿ ಹೇಳಿದರು.

ಮೈಸೂರಿನ ಎಸ್‌ಡಿಎಂ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಶನಿವಾರ ತನ್ನ ಸಂಸ್ಥಾಪನ ದಿನದ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ 'ಆರೋಗ್ಯ ವಲಯ- ವಿಶ್ವದ ಆರ್ಥಿಕತೆ ಮುನ್ನಡೆಸುವ ಚಾಲಕ' ಕುರಿತು ಮಾತನಾಡಿದರು.

ಇತ್ತೀಚೆಗೆ ಸ್ಫೋಟಗೊಂಡಿರುವ ಈಜಿಪ್ಟ್ ಹಾಗೂ ಅರಬ್ ದೇಶಗಳ ಅಶಾಂತಿಗೆ ನಿರುದ್ಯೋಗವೇ ಕಾರಣ. ಕಳೆದ 10 ವರ್ಷಗಳ ಅವಧಿಯಲ್ಲಿ ಒಂದಿಷ್ಟು ಮಂದಿ ಮಾತ್ರ ಹಣವಂತರಾಗಿದ್ದಾರೆ. ಸಂಪತ್ತು ಅವರ ಬಳಿ ಕೇಂದ್ರಿಕೃತವಾಗಿದೆ. ಉದ್ಯೋಗವಿಲ್ಲದ ಬಹಳಷ್ಟು ಯುವಕರು ಸಿಡಿದಿದ್ದಾರೆ. ಈ ಕಾರಣಕ್ಕಾಗಿಯಾದರೂ ಆಡಳಿತಗಾರರು ಅತಿಹೆಚ್ಚು ಉದ್ಯೋಗ ಸೃಷ್ಟಿಸುವ ಆರೋಗ್ಯ ಹಾಗೂ ಔಷಧ ವಲಯದ ಕಡೆ ಕಣ್ಣು ಹಾಯಿಸಬೇಕಿದೆ. ನಕ್ಸಲ್ ಪೀಡಿತ ಭಾರತದ 130 ಜಿಲ್ಲೆಗಳಲ್ಲೂ ಆರೋಗ್ಯ ವಲಯಕ್ಕೆ ಒತ್ತು ನೀಡಿದರೆ ಆ ಸಮಸ್ಯೆಗೆ ಪರಿಹಾರ ಸಿಗುತ್ತದೆ. ಆರೋಗ್ಯ ವಲಯದಲ್ಲಿ ಸೃಷ್ಟಿಯಾಗುವ ನರ್ಸ್ ಹಾಗೂ ಇನ್ನಿತರ ಉದ್ಯೋಗಗಳು ಸಮಾಜದ ಬಡ ಹಾಗೂ ಮಧ್ಯಮ ವರ್ಗದವರಿಗೆ ಸಿಗುತ್ತವೆ' ಎಂದರು.

ನಮ್ಮ ಸರಕಾರಗಳು ಒಳ್ಳೆಯ ಕೆಲಸವನ್ನು ಒಳ್ಳೆಯದಲ್ಲದ ಉದ್ದೇಶಕ್ಕಾಗಿ ಮಾಡುತ್ತಿರುತ್ತವೆ. ಮಾಹಿತಿ ತಂತ್ರಜ್ಞಾನ ವಲಯದ ಅಭಿವೃದ್ಧಿಗಾಗಿ ಸರಕಾರ ಕಡಿಮೆ ದರದಲ್ಲಿ ಭೂಮಿ, ವಿದ್ಯುತ್ ಹಾಗೂ ತೆರಿಗೆ ರಿಯಾಯಿತಿ ನೀಡುತ್ತದೆ. ಆದರೆ ಆರೋಗ್ಯ ವೃತ್ತಿಯನ್ನು ಮಾತ್ರ ಸಿನಿಮಾ ಹಾಗೂ ಮಾಲ್‌ನಂತಹ ಮನರಂಜನಾ ವಲಯದೊಂದಿಗೆ ಸಮೀಕರಿಸಿದೆ. ಇದರ ಹೊರತಾಗಿಯೂ ಐಟಿ ಕ್ಷೇತ್ರದಲ್ಲಿ ಸೃಷ್ಟಿಯಾಗುವ ಉದ್ಯೋಗ ಎಷ್ಟು ಮತ್ತು ಅದು ಯಾರ ಕೈಗೆ ಎಟುಕುತ್ತದೆ ?' ಎಂದು ಸರಕಾರದ ಆದ್ಯತೆಯನ್ನು ಸೌಮ್ಯವಾಗಿಯೇ ತರಾಟೆಗೆ ತೆಗೆದುಕೊಂಡರು.

ಕಾರ್ಪೋರೇಟ್ ಸಂಸ್ಥೆಗಳು ಆರೋಗ್ಯ ವಲಯವನ್ನು ಸಂಪೂರ್ಣವಾಗಿ ಆಕ್ರಮಿಸಿಕೊಂಡಿವೆ. ಅಲ್ಲಿ ಕೆಲಸ ಮಾಡಲು ಉದ್ಯಮಶೀಲರಿಗೆ ಸಾಧ್ಯವಿಲ್ಲ ಎಂಬ ವಾದವನ್ನು ತಳ್ಳಿ ಹಾಕಿದ ಡಾ. ಶೆಟ್ಟಿ, 'ಆರೋಗ್ಯ ಕ್ಷೇತ್ರಕ್ಕೆ ಮೂರು ಮಿಲಿಯನ್ ಹಾಸಿಗೆಗಳು ಬೇಕಿದೆ. ಕೆಲವು ವರ್ಗಗಳನ್ನು ಗುರಿಯಾಗಿಸಿಕೊಂಡು ಸೇವೆ ಸಲ್ಲಿಸುತ್ತಿರುವ ಕಾರ್ಪೋರೇಟ್ ಸಂಸ್ಥೆಗಳು ಶೇ. 0.1ರಷ್ಟು ಬೇಡಿಕೆಯನ್ನಷ್ಟೇ ಪೂರೈಸಿವೆ. ಶ್ರೀಸಾಮಾನ್ಯರನ್ನು ಗುರಿಯಾಗಿಸಿಕೊಂಡು ಕೆಲಸ ಮಾಡಲು ಬಂದರೆ, ದೊಡ್ಡ ಅವಕಾಶಗಳೇ ಇಲ್ಲುಂಟು' ಎಂದರು.

**ವರ್ಷಕ್ಕೆ 100 ಮೆಡಿಕಲ್ ಕಾಲೇಜು ಸ್ಥಾಪಿಸಿ :** ವೈದ್ಯಕೀಯ ಶಿಕ್ಷಣ ದುಬಾರಿ ಆಗಿರುವುದರಿಂದಲೇ ಆರೋಗ್ಯ ವಲಯದಲ್ಲಿ ವೈದ್ಯರ ಕೊರತೆ ಹೆಚ್ಚಿದೆ ಎಂಬ ಅಂಶವನ್ನು ಒಪ್ಪಿಕೊಂಡ ಡಾ. ಶೆಟ್ಟಿ, ಭಾರತದಲ್ಲಿ ಒಟ್ಟು 350 ವೈದ್ಯಕಾಲೇಜುಗಳಿವೆ. ಇವು ನಮ್ಮ ದೇಶಕ್ಕೆ ಸಾಲುವುದಿಲ್ಲ. ಸರಕಾರ ಮುಂದಿನ ಐದು ವರ್ಷಗಳ ಅವಧಿಯಲ್ಲಿ ಪ್ರತಿ ವರ್ಷ 100 ಹೊಸ ಮೆಡಿಕಲ್ ಕಾಲೇಜುಗಳನ್ನು ಆರಂಭಿಸಬೇಕು. ಎಲ್ಲ ಜಿಲ್ಲಾ ಕೇಂದ್ರಗಳಲ್ಲಿರುವ ಸರಕಾರಿ ಆಸ್ಪತ್ರೆಗಳಲ್ಲೂ ಕಾಲೇಜು ತೆರೆಯಬಹುದು. ವಿಶೇಷವಾಗಿ ಭಾರತ ಸರಕಾರ ಉತ್ತರ ಹಾಗೂ ಪೂರ್ವಾಂಚಲದ ರಾಜ್ಯಗಳಲ್ಲಿ ಹೊಸ ಕಾಲೇಜುಗಳನ್ನು ಆರಂಭಿಸಬೇಕಿದೆ ಎಂದು ಸಲಹೆ ನೀಡಿದರು.

ಸಂಸ್ಥೆಯ ಅಧ್ಯಕ್ಷರೂ ಆಗಿರುವ ಧರ್ಮಸ್ಥಳ ಶ್ರೀ ಕ್ಷೇತ್ರದ ಧರ್ಮಾಧಿಕಾರಿ ಡಾ. ಡಿ. ವೀರೇಂದ್ರ ಹೆಗ್ಗಡೆ ಮಾತನಾಡಿದರು. ಸಂಸ್ಥೆ ನಿರ್ದೇಶಕ ಡಾ. ಎನ್. ಆರ್. ಪರಶುರಾಮನ್ ಪ್ರಾಸ್ತಾವಿಕ ಭಾಷಣ ಮಾಡಿದರು.

### ಮೈಸೂರು ಆಸ್ಪತ್ರೆ ಎಂಟು ತಿಂಗಳಲ್ಲಿ ಪೂರ್ಣ: ಡಾ. ಶೆಟ್ಟಿ

ದೇಶದ ನಾನಾ ನಗರಗಳಲ್ಲಿ ಕಡಿಮೆ ವೆಚ್ಚದ ಆಸ್ಪತ್ರೆಗಳ ನಿರ್ಮಾಣ ಯೋಜನೆ ಕೈಗೆತ್ತಿಕೊಂಡಿರುವ ಡಾ. ದೇವಿಪ್ರಸಾದ್ ಶೆಟ್ಟಿ, ಈ ಯೋಜನೆಯಲ್ಲಿಯೇ ಸೇರಿಕೊಂಡಿರುವ ಮೈಸೂರು ಆಸ್ಪತ್ರೆ ನಿರ್ಮಾಣ ಕಾರ್ಯ ಮುಂದಿನ ಎಂಟು ತಿಂಗಳೊಳಗೆ ಮುಗಿಯಲಿದೆ ಎಂದು ತಿಳಿಸಿದರು.

ಎಲ್ ಅಂಡ್ ಟಿ ನೆರವಿನೊಂದಿಗೆ ನಿರ್ಮಾಣಗೊಳ್ಳುತ್ತಿರುವ 300 ಹಾಸಿಗೆ ಸಾಮರ್ಥ್ಯವುಳ್ಳ ಮೈಸೂರು ಆಸ್ಪತ್ರೆಗೆ 7 ಮಿಲಿಯನ್ ಡಾಲರ್(35 ಕೋಟಿ ರೂ) ಖರ್ಚಾಗಲಿದೆ. ಈ ಆಸ್ಪತ್ರೆಯಲ್ಲಿ ಹವಾ ನಿಯಂತ್ರಿತ ವ್ಯವಸ್ಥೆ ಇರುವುದಿಲ್ಲ. ಆಸ್ಪತ್ರೆಗೆ ಸೇರುವವರ ಸಂಗಾತಿಯೇ ಅವರ ಆರೋಗ್ಯದ ಬಗ್ಗೆ ನಿಗಾ ವಹಿಸುವ (ನರ್ಸ್ ಕೆಲಸ) ಸ್ಟಾನ್‌ಫೋರ್ಡ್ ಮಾದರಿಯನ್ನು ಅಳವಡಿಸಲಾಗುವುದು ಎಂದು ತಿಳಿಸಿದರು.